ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಅಧಿಕಾರಿಗಳನ್ನು ಜವಾಬ್ದಾರಿ ಮಾಡಲಿ. ಅದು ಬಿಟ್ಟು ಈ ರೀತಿ ಮಾಡಿದರೆ ಹೇಗೆ? ನಾವು ಇದನ್ನು ವಿರೋಧಿಸುತ್ತೇವೆ.

(ಗೊಂದಲ)

(ಈ ಹಂತದಲ್ಲಿ ಬಿಜೆಪಿ ಸದಸ್ಯರು ಸದನ ಬಾವಿಗೆ ಬಂದು ಧರಣಿಯಲ್ಲಿ ನಿರತರಾದರು)

ಅಧ್ಯಕ್ಷರು : ಆಯಿತು, ಬಿಡಿ ನೀವು ಉತ್ತರ ಹೇಳಿ.

(ಗೊಂದಲ)

ಶ್ರೀ ಹೆಚ್.ಕೆ. ಪಾಟೀಲ್ : ಕಾಂಗ್ರೆಸ್‌ನವರು ನಮ್ಮ ಜನರ ಕೈಗೆ ಅಧಿಕಾರ ಕೊಡುವುದಕ್ಕೆ ಬದ್ಧರಾಗಿದ್ದೇವೆ, ವಚನಬದ್ಧರಾಗಿದ್ದೇವೆ. ಆದುದರಿಂದ ಜನರಿಗೆ ಅಧಿಕಾರ ಕೊಡಬೇಕೆನ್ನುವ ದೃಷ್ಟಿಯಿಂದ, ಗ್ರಾಮ ಪಂಚಾಯಿತಿಯ ಅಧ್ಯಕ್ಷ ಇರಲಿ, ಗ್ರಾಮ ಪಂಚಾಯಿತಿಯ P.D.O. ಇರಲಿ, ಗ್ರಾಮ ಪಂಚಾಯಿತಿಯ ಸದಸ್ಯ ಇರಲಿ, ಇವರು ಯಾರೇ ತಮ್ಮ ಜವಾಬ್ದಾರಿಯನ್ನು ಈ ಗ್ರಾಮ ಸಭೆ, ವಾರ್ಡ್ ಸಭೆ ಮಾಡುವುದಕ್ಕೆ ವಿಫಲರಾಗುತ್ತಾರೋ, ಅವರ ಮೇಲೆ ಕ್ರಮ ತೆಗೆದುಕೊಳ್ಳತಕ್ಕಂಥದ್ದಕ್ಕೆ ಎಲ್ಲಾ ರೀತಿಯಿಂದಲೂ ನಾವು ಬದ್ಧರಿದ್ದೇವೆ. ಆಮೇಲೆ ಅವರ ಏನೇನು ಸಲಹೆ ಇದ್ದವು, ಅವುಗಳನ್ನು ಒಪ್ಪಿ ತೆಗೆದುಕೊಂಡಿದ್ದೇವೆ ಆದಾಗ್ಯೂ ತಾವು ಇವತ್ತು ಸದನದ ಬಾವಿಗೆ ಬಂದಿರುವುದು,. ಇದು ಪಂಚಾಯತ್ ರಾಜ್ ವ್ಯವಸ್ಥೆಗೆ ಒಂದು ರೀತಿ ಮಾರಕವಾಗಿ ನಡೆದುಕೊಳ್ಳುತ್ತಿದ್ದೀರಿ. ಜನ ನಿಮ್ಮನ್ನು ನೋಡುತ್ತಿದ್ದಾರೆ.plt is not merely the Speaker, it is people whoi are looking at you.

(ಗೊಂದಲ)

ಅಧ್ಯಕ್ಷರು : ಇದು ದಾಖಲೆಗೆ ಹೋಗುವುದಿಲ್ಲ. ದಾಖಲೆಗೆ ಹೋಗುವುದಿಲ್ಲ.

ಶ್ರೀ ಹೆಚ್.ಕೆ. ಪಾಟೀಲ್ : ಜನರು ನಿಮಗೆ ಪೆಟ್ಟನ್ನು ಕೊಡುತ್ತಾರೆನ್ನುವ ಮಾತನ್ನು ಹೇಳಿ ಇದನ್ನು ಪಾಸು ಮಾಡಿಕೊಡ ಬೇಕೆಂದು ತಮ್ಮಲ್ಲಿ ಅರಿಕೆ ಮಾಡಿಕೊಳ್ಳತ್ತೇನೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ವಿರೋಧ ಪಕ್ಷದ ನಾಯಕರು):– ಮಾನ್ಯ ಸಭಾಧ್ಯಕ್ಷರೆ, ಇವತ್ತು ಈ ಬಿಲ್ ಅನ್ನು ಪಾಸ್ ಮಾಡಿಕೊಳ್ಳಲೇಬೇಕೆಂಬ ಹಠಕ್ಕೆ